# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೫<br>Part – V | ಬೆಂಗಳೂರು, ಶನಿವಾರ, ೦೫, ಸೆಪ್ಟೆಂಬರ್, ೨೦೨೬ (ಭಾದ್ರಪದ ೧೪, ಶಕವರ್ಷ, ೧೯೪೮)<br>BENGALURU, SATURDAY, 05 SEPTEMBER, 2026 ( BHADRAPADA 14, SHAKAVARSHA, 1948) | ನಂ. ೯೦೫<br>No. 905 |
|---|---|---|



## ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಇಲಾಖೆ

## ಆಯ್ಕೆ ಪ್ರಾಧಿಕಾರಿ ಹಾಗೂ ವಿಭಾಗೀಯ ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಕಲಬುರಗಿ ವಿಭಾಗ, ಕಲಬುರಗಿ.

**ಸಂಖ್ಯೆ: ಸನಿ1/ಎ1/ಸ.ಪ್ರೌ.ಶಾ.ಶಿ.ನೇಮಕಾತಿ/1/2026-27** **ದಿನಾಂಕ: 05-09-2026**

## ಸೇರ್ಪಡೆ ಅಧಿಸೂಚನೆ

2026-27ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ವಿಭಾಗದ ವ್ಯಾಪ್ತಿಯ ಸರ್ಕಾರಿ ಪ್ರೌಢ ಶಾಲೆಗಳಲ್ಲಿಖಾಲಿ ಇರುವ **(ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ(LC) ಶೇ 80) ರಷ್ಟು ಹುದ್ದೆಗಳಿಗೆ** ಪ್ರೌಢ ಶಾಲಾ ಸಹ ಶಿಕ್ಷಕರು (ಕನ್ನಡ ಭಾಷೆ, ಆಂಗ್ಲ ಭಾಷೆ, ಕಲಾ (ಕನ್ನಡ/ಇಂಗ್ಲೀಷ್ ಮಾಧ್ಯಮ) ಜೀವ ವಿಜ್ಞಾನ (ಕನ್ನಡ /ಇಂಗ್ಲೀಷ್ ಮಾಧ್ಯಮ) ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು(ಗ್ರೇಡ್-I) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 04.09.2026 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಲಾದ **ಸೇರ್ಪಡೆ ಅಧಿಸೂಚನೆಯನ್ನು** ಹಿಂಪಡೆಯಲಾಗಿದೆ. ದಿನಾಂಕ:11.08.2026ರಂದು ಹೊರಡಿಸಲಾದ ಸಂಬಂಧಪಟ್ಟ ಅಧಿಸೂಚನೆಗೆ ಈ ಕೆಳಕಂಡ ಅಂಶಗಳನ್ನು ಸೇರ್ಪಡೆಗೊಳಿಸಲಾಗಿದೆ. ಅದರಂತೆ ಓದಿಕೊಳ್ಳತಕ್ಕದ್ದು.

| ಅಧಿಸೂಚನೆಯಲ್ಲಿರುವುದು | ಸೇರ್ಪಡೆಯಂತೆ ಓದಿಕೊಳ್ಳತಕ್ಕದ್ದು |
|---|---|
| ಅಧಿಸೂಚನೆ ಪುಟ ಸಂಖ್ಯೆ: 09 ರ ಕಂಡಿಕೆ:12 ರ **ಮೀಸಲಾತಿ:ಉಪಕಂಡಿಕೆ (A)ರಲ್ಲಿ ಜಾತಿ ಮೀಸಲಾತಿ ಪ್ರಮಾಣ ಪತ್ರಗಳನ್ನು**ಸಲ್ಲಿಸುವ ಸಂಬಂಧಮಾಹಿತಿ ನೀಡಿರುವ ಕೋಷ್ಟಕದ **ಕ್ರ.ಸಂ.03 ರಲ್ಲಿ "ಪ್ರವರ್ಗ–II(a), II(b), III(a) ಮತ್ತು III(b)ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ-ಎಫ್ ರಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸಲು ತಿಳಿಸಲಾಗಿದೆ".** | ಸರ್ಕಾರದ ಆದೇಶ ಸಂಖ್ಯೆ: ಹಿಂವಕ 232 ಬಿಸಿಎ 2026 ಬೆಂಗಳೂರು, ದಿನಾಂಕ :01/09/2026 ರಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಉದ್ಯೋಗದ ಮೀಸಲಾತಿಗಾಗಿ ನೇರ ನೇಮಕಾತಿ ಸಂದರ್ಭದಲ್ಲಿ ವಿವಾಹಿತ ಮಹಿಳೆ /ಪುರುಷ ಅಭ್ಯರ್ಥಿಗಳ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವಿತರಿಸಲು ಆದೇಶಿಸಲಾಗಿರುತ್ತದೆ. ಸದರಿ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.<br>**"ವಿವಾಹಿತ ಮಹಿಳಾ/ಪುರುಷ ಅರ್ಜಿದಾರಳ/ನ ಉತ್ಪನ್ನಕ್ಕೆ ಅವಳ/ಅವನ ತಂದೆ ತಾಯಿಗಳ ಉತ್ಪನ್ನ ಸೇರಿಸಬಾರದು. ಅಂಥ ಪ್ರಕರಣಗಳಲ್ಲಿ ಪತಿ ಪತ್ನಿಯರು ಒಂದು ಸ್ವಾಯತ್ತ ಕುಟುಂಬದಂತೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಲ್ಲಿ ಅರ್ಜಿದಾರಳ/ನ ಉತ್ಪನ್ನಕ್ಕೆ ಅವಳ/ಅವನ ಪತಿ/ಪತ್ನಿಯ ಉತ್ಪನ್ನವನ್ನು ಸೇರಿಸಬೇಕು. ಅವರು ಅವಿಭಕ್ತ ಕುಟುಂಬದ ಅಂಗವಾಗಿ ವಾಸಿಸುತ್ತಿದ್ದರೆ, ಅರ್ಜಿದಾರಳ /ನ ಉತ್ಪನ್ನ ಮತ್ತು ಅವಿಭಕ್ತ ಕುಟುಂಬದ ಉತ್ಪನ್ನವನ್ನು ಒಟ್ಟಿಗೆ ಸೇರಿಸಿ ಕುಟುಂಬದ ಉತ್ಪನ್ನವನ್ನು ಕಂಡುಹಿಡಿಯಬೇಕು."**<br><br>**ಅದರಂತೆ,** ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ–II(a), II(b), III(a), ಮತ್ತು III(b) ವರ್ಗಗಳಿಗೆ ಸೇರಿದ ವಿವಾಹಿತ ಮಹಿಳಾ/ಪುರುಷ ಅಭ್ಯರ್ಥಿಗಳು ಜಾತಿ ಮತ್ತು |

| | |
|---|---|
| | ಆದಾಯ ಪ್ರಮಾಣ ಪತ್ರವನ್ನು **ನಮೂನೆ-ಎಫ್** ರಲ್ಲಿ ಪಡೆದು ಸದರಿ ನೇಮಕಾತಿಯ ಅರ್ಜಿಯೊಂದಿಗೆ ಲಗತ್ತಿಸಿ, ಸಲ್ಲಿಸುವುದು. ಅದರಂತೆ ಓದಿಕೊಳ್ಳತಕ್ಕದ್ದು.<br><br>ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ–II(a), II(b), III(a), ಮತ್ತು III(b) ವರ್ಗಗಳಿಗೆ ಸೇರಿದ ವಿವಾಹಿತ ಮಹಿಳಾ/ಪುರುಷ ಅಭ್ಯರ್ಥಿಗಳು ಈ ಮೇಲಿನ ಸರ್ಕಾರಿ ಆದೇಶದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸದೇ ಆನ್‌ಲೈನ್ ಅರ್ಜಿಯನ್ನು, Submit ಮಾಡಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನಿಯಮದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಸದಾಗಿ Upload ಮಾಡಲು Online ಅರ್ಜಿಯಲ್ಲಿ **Edit ಗೆ ಅವಕಾಶ ನೀಡಿದೆ** ಹಾಗೂ ಅರ್ಜಿ ಸಲ್ಲಿಸುವ **ಕೊನೆಯ ದಿನಾಂಕವನ್ನು ಸಹದಿನಾಂಕ:25/09/2026 ಹಾಗೂ ಪಾವತಿಸಿದ ಶುಲ್ಕ ಇತ್ಯರ್ಥಪಡಿಸಿಕೊಳ್ಳಲು ಕೊನೆಯ ದಿನಾಂಕ:28/09/2026ರವರೆಗೆ ವಿಸ್ತರಿಸಿದೆ.** ಅಭ್ಯರ್ಥಿಗಳು **Edit Option** ಅನ್ನು ಬಳಸಿಕೊಂಡು ನಿಯಮದಂತೆ ತಮ್ಮ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಿ, ಅರ್ಜಿ ಸಲ್ಲಿಸುವುದು. |
| ಅಧಿಸೂಚನೆಯಲ್ಲಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:07/09/2026 ಹಾಗೂ ಶುಲ್ಕ ಪಾವತಿಸಿರುವ ಶುಲ್ಕವನ್ನು ಖಚಿತಪಡಿಸಿಕೊಳ್ಳಲು ನಿಗದಿಪಡಿಸಿದ ಕೊನೆಯ ದಿನಾಂಕ:10/09/2026 ಆಗಿರುತ್ತದೆ. | ಅಭ್ಯರ್ಥಿಗಳು ಶುಲ್ಕ ಪಾವತಿಸಿ **ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:25/09/2026 ಹಾಗೂ ಪಾವತಿಸಿದ ಶುಲ್ಕವನ್ನು ಇತ್ಯರ್ಥಪಡಿಸಿಕೊಳ್ಳಲು ನಿಗದಿಪಡಿಸಿದ ಕೊನೆಯ ದಿನಾಂಕ:28/09/2026**ಎಂದು ಓದಿಕೊಳ್ಳತಕ್ಕದ್ದು.<br>ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಿದಂತೆ ಅಭ್ಯರ್ಥಿಗಳು ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಅರ್ಜಿಯೊಂದಿಗೆ **Upload** ಮಾಡಿರಬೇಕು. |
| ಅಧಿಸೂಚನೆಯಲ್ಲಿ, ಪ್ರೌಢ ಶಾಲಾ ಸಹ ಶಿಕ್ಷಕರು ಕಲಾ (ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ವಿಷಯದ ಅಂಗವಿಕಲ ಮೀಸಲಾತಿಯ ಹುದ್ದೆಗಳಿಗೆ ಸಂಬಂಧಿಸಿದಿಂತೆ ಕೆಲವೊಂದು ಜಿಲ್ಲೆಗಳ ರೋಸ್ಟರ್ ಕೋಷ್ಟಕಗಳಡಿ PH-Low Vision ಅಭ್ಯರ್ಥಿಗಳಿಗೆ ಮೀಸಲಿರಿಸಿ, ಅಧಿಸೂಚಿಸಲಾಗಿದೆ. | ಅಧಿಸೂಚನೆಯಲ್ಲಿ, ಪ್ರೌಢ ಶಾಲಾ ಭಾಷಾ ಶಿಕ್ಷಕರು (ಕನ್ನಡ ಮತ್ತು ಆಂಗ್ಲ), ಮತ್ತು ಸಹ ಶಿಕ್ಷಕರು ಕಲಾ (ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ವಿಷಯಗಳ ಅಂಗವಿಕಲ ಮೀಸಲಾತಿಯ ಹುದ್ದೆಗಳಿಗೆ ಸಂಬಂಧಿಸಿದಿಂತೆ **PH- Low Vision** ಅಭ್ಯರ್ಥಿಗಳಿಗೆ ಮೀಸಲಿರಿಸುವುದನ್ನು ಮಾರ್ಪಡಿಸಿ, **PH-Blindness and Low Vision** ಎಂದು ಸೇರ್ಪಡೆಗೊಳಿಸಿದ್ದು, ಅದರಂತೆ ಓದಿಕೊಳ್ಳತಕ್ಕದ್ದು. |
| ಅಧಿಸೂಚನೆಯಲ್ಲಿ, ಪುಟಸಂಖ್ಯೆ: 06ರ ಕಂಡಿಕೆ-09 ( III ಮತ್ತು IV ) ರಲ್ಲಿ ನೀಡಲಾದ :, ಪ್ರೌಢ ಶಾಲಾ ಸಹ ಶಿಕ್ಷಕರು ಕಲಾ (ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ಮತ್ತು ಜೀವಶಾಸ್ತ್ರ(ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಜೊತೆಗೆ ಹುದ್ದೆಯ ಮಾಧ್ಯಮಕ್ಕೆ ಸಂಬಂಧಿಸಿದಂತೆ ಅಧಿಸೂಚನೆಯಲ್ಲಿ ಈ ಕೆಳಕಂಡಂತಿರುತ್ತದೆ.<br>**ಮೇಲಿನ ವಿದ್ಯಾರ್ಹತೆಗಳ ಜೊತೆಗೆ :-**<br><br>a) ಯಾವ ಮಾಧ್ಯಮದಲ್ಲಿ ಪಾಠ ಬೋಧನೆ ಮಾಡುವರೋ ಆ ಭಾಷೆಯನ್ನು ಪದವಿ ಹಂತದಲ್ಲಿ ಅಭ್ಯಾಸಿಸಿರತಕ್ಕದ್ದು.<br>b) ಯಾವ ಅಭ್ಯರ್ಥಿಯು ಸದರಿ ಭಾಷೆಯನ್ನು ಪದವಿ ಹಂತದಲ್ಲಿ ವ್ಯಾಸಂಗ ಮಾಡಿರುವುದಿಲ್ಲವೊ ಅಂತಹ ಅಭ್ಯರ್ಥಿಯು:<br>SSLCಯಲ್ಲಿ ಆ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಪೂರೈಸಿರತಕ್ಕದ್ದು. | ಅಧಿಸೂಚನೆಯಲ್ಲಿ, ಪುಟಸಂಖ್ಯೆ: 06ರ ಕಂಡಿಕೆ-09 ( III ಮತ್ತು IV ) ರಲ್ಲಿ ನೀಡಲಾದ ಪ್ರೌಢ ಶಾಲಾ ಸಹ ಶಿಕ್ಷಕರು ಕಲಾ (ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ಮತ್ತು ಜೀವಶಾಸ್ತ್ರ(ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ಹುದ್ದೆಗಳ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದ್ದು, ಅದರಂತೆ ಓದಿಕೊಳ್ಳತಕ್ಕದ್ದು.<br><br>**ಮೇಲಿನ ವಿದ್ಯಾರ್ಹತೆಗಳ ಜೊತೆಗೆ :-**<br>a) ಯಾವ ಮಾಧ್ಯಮದಲ್ಲಿ ಪಾಠ ಬೋಧನೆ ಮಾಡುವರೋ ಆ ಭಾಷೆಯನ್ನು ಪದವಿ ಹಂತದಲ್ಲಿ ಅಭ್ಯಾಸಿಸಿರತಕ್ಕದ್ದು.<br>b) ಯಾವ ಅಭ್ಯರ್ಥಿಯು ಸದರಿ ಭಾಷೆಯನ್ನು ಪದವಿ ಹಂತದಲ್ಲಿ ವ್ಯಾಸಂಗ ಮಾಡಿರುವುದಿಲ್ಲವೊ ಅಂತಹ ಅಭ್ಯರ್ಥಿಯು:<br>SSLCಯಲ್ಲಿ ಆ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಪೂರೈಸಿರತಕ್ಕದ್ದು.<br>**ಅಥವಾ**<br>ಪದವಿ ಅಥವಾ ಎಸ್.ಎಸ್.ಎಲ್.ಸಿ ಹಂತದ ವ್ಯಾಸಂಗವನ್ನು ಆ ಮಾಧ್ಯಮದಲ್ಲಿ ಪೂರೈಸಿರತಕ್ಕದ್ದು.<br>**ಅಥವಾ**<br>UGC ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಆ ಭಾಷೆಯ ಡಿಪ್ಲೋಮಾ ಅರ್ಹತೆ ಹೊಂದಿರತಕ್ಕದ್ದು.<br>**ಅಥವಾ**<br>ಕನ್ನಡ ಭಾಷೆಯಲ್ಲಿ ಬೋಧಿಸಬೇಕಾದ ಶಿಕ್ಷಕರಾಗಿದ್ದಲ್ಲಿ ಕರ್ನಾಟಕ ರಾಜ್ಯ ಪರೀಕ್ಷಾ ಹಾಗೂ ಮೌಲ್ಯನಿರ್ಣಯ ಮಂಡಲಿಯಿಂದ ಅಥವಾ ಕನ್ನಡ |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | |
|---|---|
| **ಅಥವಾ**<br>UGC ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಆ ಭಾಷೆಯ ಡಿಪ್ಲೋಮಾ ಅರ್ಹತೆ ಹೊಂದಿರತಕ್ಕದ್ದು.<br>**ಅಥವಾ**<br>ಕನ್ನಡ ಭಾಷೆಯಲ್ಲಿ ಬೋಧಿಸಬೇಕಾದ ಶಿಕ್ಷಕರಾಗಿದ್ದಲ್ಲಿ ಕರ್ನಾಟಕ ರಾಜ್ಯ ಪರೀಕ್ಷಾ ಹಾಗೂ ಮೌಲ್ಯನಿರ್ಣಯ ಮಂಡಲಿಯಿಂದ ಅಥವಾ ಕನ್ನಡ ಸಾಹಿತ್ಯ ಪರಿಷತ್ ನಿಂದ ಕನ್ನಡ ಭಾಷಾ ಸರ್ಟಿಫಿಕೇಟ್ ಕೋರ್ಸ್‌ನ್ನು ಪೂರೈಸಿರತಕ್ಕದ್ದು. | ಸಾಹಿತ್ಯ ಪರಿಷತ್ ನಿಂದ ಕನ್ನಡ ಭಾಷಾ ಸರ್ಟಿಫಿಕೇಟ್ ಕೋರ್ಸ್‌ನ್ನು ಪೂರೈಸಿರತಕ್ಕದ್ದು. |

ಸಹಿ/-
**ಆಯ್ಕೆ ಪ್ರಾಧಿಕಾರಿ ಹಾಗೂ ವಿಭಾಗೀಯ ಸಹನಿರ್ದೇಶಕರು,**
**ಕಲಬುರಗಿ ವಿಭಾಗ, ಕಲಬುರಗಿ**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU